◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

NEED 24 NEWS
हर ख़बर, हर शहर

ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

तेज़ | सटीक | निष्पक्ष | जनहित में | सच की आवाज़ | जन-जन की आवाज़ | निडर पत्रकारिता

KARNATAKA | ನೀಡ್ 24 ನ್ಯೂಸ್ · ಪ್ರತಿ ಸುದ್ದಿ, ಪ್ರತಿ ನಗರ | 17 November 2026

AGRICULTURE

ಬೆಂಗಳೂರು: GKVK ಕೃಷಿ ಮೇಳದಲ್ಲಿ ಹೊಸ ಬೆಳೆ ತಳಿಗಳು ಬಿಡುಗಡೆ



ಬೆಂಗಳೂರು – ಯು.ಎಸ್.ಎಸ್. (University of Agricultural Sciences) ಬೆಂಗಳೂರು ಕ್ಯಾಂಪಸ್‌ನ GKVK ನಲ್ಲಿ ನಡೆಸಿದ ಕೃಷಿ ಮೇಳದಲ್ಲಿ ಹಲವಾರು ಹೊಸ ಬೆಳೆ ತಳಿಗಳ ಬಿಡುಗಡೆ ಮಾಡಲಾಗಿದೆ.

ಈ ಮೇಳದಲ್ಲಿ 45 ರಿಂದ 55 ದಿನಗಳಲ್ಲಿ ಕೊಯಿಲಿಗೆ ಬರುವ ಅಲಂಕಾರಿಕ "ಸೂರ್ಯಕಾಂತಿ" ಹೂವು, 40 ದಿನಗಳಲ್ಲಿ ಹೂತುವ "ವೆನಿಲ್ಲಾ" ಬಿಳಿ ಹೂವು, "GPU 101" ಎಂಬ ಹೊಸ ರಾಗಿ ತಳಿ, "KBGA 18" ಹಾಗೂ "MAH 20-45" ಎಂಬ ಮುಸುಕಿನ ಜೋಳದ ತಳಿಗಳು ಪ್ರಸ್ತುತಪಡಿಸಲಾಯಿತು.

ಬಿಡುಗಡೆಯಾದ ಈ ತಳಿಗಳು GKVK ಯ ಸುಮಾರು 10 ಎಕರೆ ಪ್ರದೇಶದಲ್ಲಿ ನಡೆಸಿದ ಪ್ರಯೋಗಾತ್ಮಕ ಹಂತದಲ್ಲಿ ಪ್ರದರ್ಶಿಸಲ್ಪಟ್ಟಿದ್ದು, ರೈತರಿಗೆ ಬೇಗನೆ ಹಣ್ಣು ಮತ್ತು ಧಾನ್ಯ ಉತ್ಪಾದನೆಗಾಗಿ ಆಯ್ಕೆಗಳನ್ನೊದಗಿಸುವ ಉದ್ದೇಶವಿದೆ.

ಈ ಹೊಸ ತಳಿಗಳ ಪರಿಚಯದಿಂದ ಕೃಷಿ ಉತ್ಪಾದಕತೆ ಹೆಚ್ಚುವ ನಿರೀಕ್ಷೆ ಇದೆ ಮತ್ತು ಸ್ಥಳೀಯ ರೈತರಿಗೆ ತ್ವರಿತ ಲಾಭದಾಯಕ ಆಯ್ಕೆಗಳು ಲಭ್ಯವಾಗುತ್ತವೆ.

— Santhosh S, Bengaluru

AGRICULTURE

ಯೆಲಹಂಕ ಕೃಷಿ ಮೇಳದಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಉಲ್ಲಂಘನೆಗೆ ಆಯೋಜಕರಿಗೆ ₹4000 ದಂಡ



ಬೇಲೂರು, ಕರ್ನಾಟಕ – 2026ರಲ್ಲಿ ಯೆಲಹಂಕದಲ್ಲಿ ಆಯೋಜಿಸಲಾದ ಕೃಷಿ ಮೇಳದಲ್ಲಿ, ನಿಷೇಧಿತ ಪ್ಲಾಸ್ಟಿಕ್ ಬಳಕೆ ಹಾಗೂ ತ್ಯಾಜ್ಯ ವಿಲೇವಾರಿ ನಿಯಮಗಳ ಉಲ್ಲಂಘನೆಗಾಗಿ ಮೇಳದ ಆಯೋಜಕರು ಮತ್ತು ಮಳಿಗೆಯ ದಾರರಿಗೆ ಪ್ರತಿ ವ್ಯಕ್ತಿಗೆ ₹4000 ದಂಡ ವಿಧಿಸಲಾಯಿತು.

ಮೇಳದ ಮೇಲ್ವಿಚಾರಣಾ ಅಧಿಕಾರಿಗಳು ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆ ಮತ್ತು ತ್ಯಾಜ್ಯಗಳ ಸರಿಯಾದ ವಿಂಗಡಣೆ ಇಲ್ಲದಿರುವುದನ್ನು ಗಮನಿಸಿ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಶೂನ್ಯ ತ್ಯಾಜ್ಯ ಕಾರ್ಯ ಕ್ರಮವನ್ನು ಅನುಸರಿಸುವಂತೆ ಸೂಚಿಸಿದರು.

ಅಧಿಕಾರಿಗಳು ಆಯೋಜಕರಿಗೆ ವಿಜ್ಞಾನಾಧಾರಿತ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಅಳವಡಿಸಿ, ಮೇಳದ ಉಳಿದ ಅವಧಿಯಲ್ಲಿ ಪರಿಸರ ಸ್ನೇಹಿ ಕ್ರಮಗಳನ್ನು ಪಾಲಿಸುವಂತೆ ಆದೇಶಿಸಿದರು. ಈ ಕ್ರಮಗಳು ಮೇಳದ ಹಸಿರು ಪರಿಸರವನ್ನು ಕಾಪಾಡಿ, ಭಾಗವಹಿಸುವವರಿಗೆ ಸ್ವಚ್ಛ ಮತ್ತು ಸುರಕ್ಷಿತ ವಾತಾವರಣವನ್ನು ಒದಗಿಸುವ ಉದ್ದೇಶವನ್ನು ಹೊಂದಿವೆ.

ಈ ದಂಡ ಮತ್ತು ಸೂಚನೆಗಳು ಸ್ಥಳೀಯ ವ್ಯಾಪಾರಿಗಳಲ್ಲಿ ಪರಿಸರ ಜಾಗೃತಿಯನ್ನು ಹೆಚ್ಚಿಸುವುದರ ಜೊತೆಗೆ, ಭವಿಷ್ಯದ ಕಾರ್ಯಕ್ರಮಗಳಲ್ಲಿ ಕಠಿಣ ಪರಿಸರ ನಿಯಮಗಳ ಪಾಲನೆಗೆ ಮಾದರಿಯಾಗುವ ನಿರೀಕ್ಷೆಯಿದೆ.

— Santhosh S, Bengaluru

ದೇವದುರ್ಗ ತಾಲೂಕಿನ ರೈತರ ಸಮಸ್ಯೆ ಬಗೆಹರಿಸಿ ಕಾಲುವೆಗೆ ನೀರು ಹರಿಸದಿದ್ದರೆ ವಿಧಾನಸೌಧ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತೇನೆ:- ಶಾಸಕಿ ಕರೆಮ್ಮ ಜಿ ನಾಯಕ



ದೇವದುರ್ಗ ಬ್ರೇಕಿಂಗ್ ನ್ಯೂಸ್

ದೇವದುರ್ಗ ತಾಲೂಕಿನ ರೈತರ ಸಮಸ್ಯೆ ಬಗೆಹರಿಸಿ ಕಾಲುವೆಗೆ ನೀರು ಹರಿಸದಿದ್ದರೆ

ವಿಧಾನಸೌಧ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತೇನೆ:- ಶಾಸಕಿ ಕರೆಮ್ಮ ಜಿ ನಾಯಕ

ದೇವದುರ್ಗ, ನ.16: ದೇವದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ತೀವ್ರ ಬರ ಪರಿಸ್ಥಿತಿ ನಿರ್ವಹಣೆ, ನಾರಾಯಣಪುರ ಬಲದಂಡೆ ಕಾಲುವೆಗೆ ಜನವರಿ ತಿಂಗಳವರೆಗೆ ನೀರು ಹರಿಸುವುದು, ನೀರಾವರಿ ಕಚೇರಿಗಳ ಸ್ಥಳಾಂತರ ಆದೇಶ ರದ್ದುಪಡಿಸುವುದು ಹಾಗೂ ಬೆಲೆ ಏರಿಕೆ ಖಂಡಿಸಿ ಜೆಡಿಎಸ್ ವತಿಯಿಂದ ಸೋಮವಾರ ದೇವದುರ್ಗ ಪಟ್ಟಣದ ಸಿರವಾರ ಕ್ರಾಸ್‌ನಲ್ಲಿ ಶಾಸಕಿ ಕರೆಮ್ಮ ಜಿ. ನಾಯಕ ಅವರ ನೇತೃತ್ವದಲ್ಲಿ ಬೃಹತ್ ರಸ್ತೆ ತಡೆ ಚಳವಳಿ ಹಾಗೂ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ಯನ್ನು ಉದ್ದೇಸಿಸಿ ಮಾತನಾಡಿದ

ಬಾಕ್ಸ್ ನಲ್ಲಿ

ಶಾಸಕಿ ಕರೆಮ್ಮ ಜಿ. ನಾಯಕ ಅವರು ರೈತರ ಸಮಸ್ಯೆ ಬಗೆಹರಿಸಿ ಕಾಲುವೆಗೆ ನೀರು ಹರಿಸದಿದ್ದರೆ

ವಿಧಾನಸೌಧ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತೇನೆ, ಇನ್ನೊಮ್ಮೆ ಮುಖ್ಯಮಂತ್ರಿ ಗಳನ್ನು ಭೇಟಿ ಮಾಡಲಾಗುವದು

ನೀರಾವರಿ ಇಲಾಖೆ ಎಮ್ ಡಿ ಅವರನ್ನು ಭೇಟಿ ಯಾಗಿ ಇನ್ನೊಮ್ಮೆ ರೈತರ ಸಮಸ್ಯೆ ಗಳನ್ನು ವಿವರಿಸಲಾಗುವದು, ರೈತರ ಸಮಸ್ಯೆ ಗೆ ಪರಿಹಾರ ಸಿಗದಿದ್ದರೆ ಬಗೆಹರಿಸಿ ಕಾಲುವೆಗೆ ನೀರು ಹರಿಸದಿದ್ದರೆ

ವಿಧಾನಸೌಧ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತೇನೆ, ಇನ್ನೊಮ್ಮೆ ಮುಖ್ಯಮಂತ್ರಿ ಗಳನ್ನು ಭೇಟಿ ಮಾಡಲಾಗುವದು ಎಂದು ಪ್ರತಿಭಟನೆ ಉದ್ದೇಸಿಸಿ ಮಾತನಾಡಿದರು

ಮುಂಗಾರು ಮತ್ತು ಹಿಂಗಾರು ಮಳೆ ಕೈಕೊಟ್ಟ ಪರಿಣಾಮ ದೇವದುರ್ಗ ತಾಲ್ಲೂಕಿನಲ್ಲಿ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ರೈತರು, ಕೃಷಿ ಕಾರ್ಮಿಕರು ಹಾಗೂ ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿವೆ. ಬೆಳೆಗಳು ಒಣಗುತ್ತಿದ್ದು, ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಕೊರತೆ ಎದುರಾಗಿದೆ. ಗ್ರಾಮೀಣ ಭಾಗದಲ್ಲಿ ಉದ್ಯೋಗಾವಕಾಶಗಳಿಲ್ಲದೆ ಬಡ ಕುಟುಂಬಗಳು ಜೀವನೋಪಾಯಕ್ಕಾಗಿ ಗೋವಾ ಮತ್ತು ಬೆಂಗಳೂರಿನತ್ತ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಶಾಸಕಿ ಕರೆಮ್ಮ ಜಿ ನಾಯಕ ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಬಸನಗೌಡ ದೇಸಾಯಿ, ರೈತರಿಗೆ ನೀಡಿದ ಭರವಸೆಯಂತೆ ಸರ್ಕಾರ ಕೂಡಲೇ ನೀರು ಹರಿಸಬೇಕು. ಇಲ್ಲದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆಗಳಿಗೆ ನೀರು ಒದಗಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಎರಡೂ ಹಂಗಾಮು ಸೇರಿ ಒಟ್ಟು 18 ಟಿಎಂಸಿ ನೀರು ನೀಡುವುದಾಗಿ ಹೇಳಿದ್ದರೂ, ಭರವಸೆಯಂತೆ ನೀರು ಪೂರೈಸಿಲ್ಲ. ನೀರಿನ ಅಂಕಿ-ಅಂಶಗಳ ಬಗ್ಗೆಯೂ ತಪ್ಪು ಮಾಹಿತಿ ನೀಡಲಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ದೇವದುರ್ಗ ತಾಲ್ಲೂಕಿನಲ್ಲಿ ಸುಮಾರು 75 ಸಾವಿರ ಎಕರೆ ಪ್ರದೇಶದಲ್ಲಿ ಭತ್ತ ಹಾಗೂ 15 ಸಾವಿರ ಎಕರೆ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆ ಬೆಳೆಯಲಾಗಿದೆ. ಈ ಬೆಳೆಗಳನ್ನು ಉಳಿಸಲು ನಾರಾಯಣಪುರ ಬಲದಂಡೆ ಕಾಲುವೆಗೆ ಜನವರಿ ತಿಂಗಳವರೆಗೆ ನಿರಂತರವಾಗಿ ನೀರು ಹರಿಸಬೇಕು. ಮೆಣಸಿನಕಾಯಿ ಬೆಳೆ ಕಟಾವಿಗೆ ಬರುವವರೆಗೂ ನೀರು ಪೂರೈಸುವುದು ರೈತರ ಹಕ್ಕಾಗಿದೆ. ನೀರಿನ ಕೊರತೆಯಿಂದ ಉಂಟಾದ ಬೆಳೆ ನಷ್ಟವನ್ನು ಅಂದಾಜಿಸಿ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕಿನಲ್ಲಿ ಸುಮಾರು 11 ಸಾವಿರ ರೈತರು ಬೆಳೆ ವಿಮೆ ಮಾಡಿಸಿದ್ದು, ವಿಮಾ ಕಂತು ಪಾವತಿಸಿರುವ ಎಲ್ಲ ಅರ್ಹ ರೈತರಿಗೆ ತಕ್ಷಣ ಬೆಳೆ ವಿಮೆ ಪರಿಹಾರ ಬಿಡುಗಡೆ ಮಾಡಬೇಕು. ರೈತರ ಕೃಷಿ ಸಾಲ ಮನ್ನಾ ಮಾಡಬೇಕು. ಎಕರೆವಾರು ವೈಜ್ಞಾನಿಕ ಬೆಳೆ ಹಾನಿ ಪರಿಹಾರ ವಿತರಿಸಬೇಕು ಎಂದು ಆಗ್ರಹಿಸಿದರು.

ಕುಡಿಯುವ ನೀರು, ಮೇವು ಕೊರತೆ ನಿವಾರಿಸಲು ಒತ್ತಾಯ:

ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದ್ದು, ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದೆ. ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಿದೆ. ಆದ್ದರಿಂದ ಅಗತ್ಯವಿರುವ ಕಡೆ ಗೋಶಾಲೆ ಮತ್ತು ಮೇವು ಬ್ಯಾಂಕ್‌ಗಳನ್ನು ಆರಂಭಿಸಬೇಕು. ಗ್ರಾಮೀಣ ಭಾಗದಲ್ಲಿ ಉದ್ಯೋಗಾವಕಾಶ ಕಲ್ಪಿಸಿ ವಲಸೆ ತಡೆಯಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ನೀರಾವರಿ ಕಚೇರಿಗಳ ಸ್ಥಳಾಂತರಕ್ಕೆ ವಿರೋಧ:

ನಾರಾಯಣಪುರ ಬಲದಂಡೆ ಕಾಲುವೆಯ ವಿತರಣಾ ಕಾಲುವೆ ಸಂಖ್ಯೆ 15 ಮತ್ತು 16ರ ನಿರ್ವಹಣೆಗೆ ಸಂಬಂಧಿಸಿದ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ಲಾಭಾ ವಿಭಾಗ ಸಂಖ್ಯೆ 6ರ ಕಾರ್ಯಪಾಲಕ ಅಭಿಯಂತರರ ಕಚೇರಿ ಹಾಗೂ ಉಪವಿಭಾಗ ಸಂಖ್ಯೆ 18ರ ಚಿಕ್ಕಹೊನ್ನಕುಣಿ ಕಚೇರಿಗಳನ್ನು ರಾಯಚೂರಿಗೆ ಸ್ಥಳಾಂತರಿಸುವ ಆದೇಶವನ್ನು ರದ್ದುಗೊಳಿಸಬೇಕು. ರೈತರ ಅನುಕೂಲಕ್ಕಾಗಿ ಈ ಕಚೇರಿಗಳನ್ನು ಚಿಕ್ಕಹೊನ್ನಕುಣಿಯಲ್ಲಿಯೇ ಮುಂದುವರಿಸಬೇಕು. ಪ್ರಸ್ತುತ ಕೃಷ್ಣಾಪುರದಲ್ಲಿರುವ ಅಧೀಕ್ಷಕ ಅಭಿಯಂತರರ ಕಚೇರಿಯನ್ನು ದೇವದುರ್ಗ ತಾಲ್ಲೂಕಿಗೆ ಸ್ಥಳಾಂತರಿಸಬೇಕು ಎಂದು ಆಗ್ರಹಿಸಿದರು.

ಪ್ರಮುಖ ಎಂಟು ಬೇಡಿಕೆಗಳು:

1. ನಾರಾಯಣಪುರ ಬಲದಂಡೆ ಕಾಲುವೆಗೆ ಜನವರಿ ತಿಂಗಳವರೆಗೆ ನಿರಂತರವಾಗಿ ನೀರು ಹರಿಸಬೇಕು.

2. ಹಾಲಿನ ದರ, ವಿದ್ಯುತ್ ದರ ಹಾಗೂ ಬಸ್ ಪ್ರಯಾಣ ದರ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು.

3. ಬೆಳೆ ಕಳೆದುಕೊಂಡ ರೈತರಿಗೆ ಎಕರೆ ಆಧಾರದ ಮೇಲೆ ವೈಜ್ಞಾನಿಕ ಬೆಳೆ ಹಾನಿ ಪರಿಹಾರ ವಿತರಿಸಬೇಕು.

4. ಕೃಷ್ಣ ಭಾಗ್ಯ ಜಲ ನಿಗಮದ ಲಾಭಾ ವಿಭಾಗ ಸಂಖ್ಯೆ 6 ಹಾಗೂ ಉಪವಿಭಾಗ ಸಂಖ್ಯೆ 18ರ ಕಚೇರಿಗಳನ್ನು ಚಿಕ್ಕಹೊನ್ನಕುಣಿಯಲ್ಲಿಯೇ ಮುಂದುವರಿಸಬೇಕು.

5. ಕೃಷ್ಣಾಪುರದಲ್ಲಿರುವ ಅಧೀಕ್ಷಕ ಅಭಿಯಂತರರ ಕಚೇರಿಯನ್ನು ದೇವದುರ್ಗ ತಾಲ್ಲೂಕಿಗೆ ಸ್ಥಳಾಂತರಿಸಬೇಕು.

6. ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳ ರೈತರಿಗೆ ಬಾಕಿ ಇರುವ ಭೂಪರಿಹಾರ ಪಾವತಿಸಬೇಕು.

7. ತುಂಗಭದ್ರಾ ವಿತರಣಾ ಕಾಲುವೆ ಸಂಖ್ಯೆ 94ರ ವ್ಯಾಪ್ತಿಯ ನಾಗಡದಿನ್ನಿ, ಹೆಗ್ಗಡದಿನ್ನಿ ಮತ್ತು ತಿಪ್ಪಲದಿನ್ನಿ ಗ್ರಾಮಗಳಿಗೆ ಸಮರ್ಪಕವಾಗಿ ನೀರು ಹರಿಸಬೇಕು.

8. ಬೆಳೆ ವಿಮೆ ಕಂತು ಪಾವತಿಸಿರುವ ಎಲ್ಲ ಅರ್ಹ ರೈತರಿಗೆ ತಕ್ಷಣ ಬೆಳೆ ವಿಮೆ ಪರಿಹಾರ ಬಿಡುಗಡೆ ಮಾಡಬೇಕು.

ಅರ್ಹ ರೈತರಿಗೆ ತಕ್ಷಣ ಬೆಳೆ ವಿಮೆ ಪರಿಹಾರ ಬಿಡುಗಡೆ ಮಾಡಬೇಕು.

ಇದಲ್ಲದೆ, ಬರ ಪರಿಸ್ಥಿತಿ ನಿರ್ವಹಣೆಗೆ ವಿಪತ್ತು ಪರಿಹಾರ ನಿಧಿ ಬಿಡುಗಡೆ ಮಾಡಿ ತುರ್ತು ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು. ರೈತರ ಸಂಕಷ್ಟಕ್ಕೆ ಸರ್ಕಾರ ಕೂಡಲೇ ಸ್ಪಂದಿಸಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಅವರಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.


ಪ್ರತಿಭಟನೆಯಲ್ಲಿ ದೇವದುರ್ಗ ಶಾಸಕಿ ಕರೆಮ್ಮ ಜಿ. ನಾಯಕ, ಸಿದ್ದಣ್ಣ ತಾತ ಮುಂಡರಗಿ, ರೇಣುಕಸ್ವಾಮಿ, ಸಿದ್ದಯ್ಯ ತಾತ ಮಸರಕಲ್, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಮಹಾಂತೇಶ ಪಾಟೀಲ್ ಅತ್ತನೂರು, ಜಿಲ್ಲಾಧ್ಯಕ್ಷ ವಿರೂಪಾಕ್ಷಿ, ಕಾರ್ಯಾಧ್ಯಕ್ಷ ಶಿವಶಂಕರ ಪಾಟೀಲ್, ಅಂಬರೀಶ್ ಪಾಟೀಲ್, ಶಾಲಂ, ಗೋವಿಂದರಾಜ್ ಜಾಲಹಳ್ಳಿ, ಗೋವಿಂದರಾಜ್ ಕೊತ್ತದೊಡ್ಡಿ, ಶರಣಗೌಡ ಸುಂಕೇಶ್ವರಹಾಳ, ಸಿದ್ದಲಿಂಗಪ್ಪ ಗೌಡ ನಾಗಡದಿನ್ನಿ, ಮಹಿಬೂಬ್, ರಮೇಶ್ ರಾಮನಾಳ, ವೆಂಕನಗೌಡ ಕೊತ್ತದೊಡ್ಡಿ, ದ್ರಾಕ್ಷಿಣಿ, ಗೌರಿ ಜಿ. ನಾಯಕ, ಸಂತೋಷ್ ಜಿ. ನಾಯಕ, ನಾಗರಾಜ್ ಪಾಟೀಲ್ ಸೇರಿದಂತೆ ಜೆಡಿಎಸ್ ಮುಖಂಡರು, ರೈತ ಮುಖಂಡರು ಹಾಗೂ ಸಾವಿರಾರು ರೈತರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

BUSINESS

ವಿಜಯಪುರದಲ್ಲಿ ರಿಲಯನ್ಸ್ ‘ಕ್ಯಾಂಪಾ ಕೋಲಾ’ ಘಟಕದ ಭೂಮಿ ಪೂಜೆ, 5,000 ಉದ್ಯೋಗಗಳ ನಿರೀಕ್ಷೆ



ಕರ್ನಾಟಕದ ವಿಜಯಪುರ ಜಿಲ್ಲೆಯ ಮುಳವಾಡಾ ಕೈಗಾರಿಕ ಪ್ರದೇಶದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ Ltd. 1600 ಕೋಟಿ ರೂಪಾಯಿಯ ಹೂಡಿಕೆಯೊಂದಿಗೆ 109 ಎಕರೆ ವಿಸ್ತೀರ್ಣದ ‘ಕ್ಯಾಂಪಾ ಕೋಲಾ’ ಘಟಕದ ಭೂಮಿ ಪೂಜೆ ನಡೆಸಿದೆ. ಈ ಕಾರ್ಯಕ್ರಮದಲ್ಲಿ ಸ್ಥಳೀಯ ನಾಯಕರು ಹಾಗೂ ಉದ್ಯಮಿಗಳ ಉಪಸ್ಥಿತಿ ಕಂಡುಬಂತು.

ಈ ಘಟಕದ ನಿರ್ಮಾಣದಿಂದ 5,000ಕ್ಕೂ ಹೆಚ್ಚು ಜನರಿಗೆ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ. ರಿಲಯನ್ಸ್ ಸ್ಥಳೀಯ ಮತ್ತು ಸಂತ್ರಸ್ತ ಕುಟುಂಬಗಳಿಗೆ ಮೊದಲ ಆದ್ಯತೆ ನೀಡುವ ಮೂಲಕ ಪ್ರಾದೇಶಿಕ ಆರ್ಥಿಕತೆಯನ್ನು ಬಲಪಡಿಸುವ ಉದ್ದೇಶವನ್ನು ವ್ಯಕ್ತಪಡಿಸಿದೆ.

ಕ್ಯಾಂಪಾ ಕೋಲಾ ಘಟಕದ ಸ್ಥಾಪನೆಯಿಂದ ವಿಜಯಪುರದಲ್ಲಿ 20 ಕ್ಕೂ ಹೆಚ್ಚು ಕೋಕೋ-ಕೋಲಾ ಕಂಪನಿಗಳ ಆಗಮನ ಸಾಧ್ಯತೆ ಹೆಚ್ಚುತ್ತಿದೆ. ಇದರಿಂದ ಪ್ರದೇಶದ ಉದ್ಯಮ ವಲಯದಲ್ಲಿ ಹೊಸ ಹೂಡಿಕೆಗಳು ಮತ್ತು ವ್ಯವಹಾರ ಅವಕಾಶಗಳು ಉಂಟಾಗುವ ನಿರೀಕ್ಷೆ.

ಸ್ಥಳೀಯ ಅಧಿಕಾರಿಗಳು ಈ ಹೂಡಿಕೆಯು ಪ್ರಾದೇಶಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತದೆ ಎಂದು ತಿಳಿಸಿ, ಮೂಲಸೌಕರ್ಯ ಸುಧಾರಣೆ ಹಾಗೂ ತರಬೇತಿ ಕಾರ್ಯಕ್ರಮಗಳನ್ನೂ ಸಮಕಾಲದಲ್ಲಿ ಆರಂಭಿಸುವುದಾಗಿ ಘೋಷಿಸಿದ್ದಾರೆ.

— Santhosh S

ನೀರಿಗಾಗಿ ರೈತರ ಹೋರಾಟಕ್ಕೆ ಸ್ಪಂದನೆ - ಧರಣಿ ತಾತ್ಕಾಲಿಕವಾಗಿ ಅಂತ್ಯ - 3 ದಿನಗಳ ಅನಿರ್ದಿಷ್ಟಾವಧಿ ಸತ್ಯಾಗ್ರಹ ಧರಣಿ ಬಳಿಕ ನೀರು ಬಿಡುಗಡೆಗೆ ಅಧಿಕಾರಿಗಳ ಭರವಸೆ - ಧರಣಿ ಸ್ಥಳಕ್ಕೆ ಆಗಮಿಸಿದ ಶಾಸಕಿ ಕರಿಯಮ್ಮ ನಾಯಕ್ - ರೈತ ಸಂಘ, ಹಸಿರು ಸೇನೆ ಹೋರಾಟಕ್ಕೆ ಸಂದ ಜಯ



ನಾರಾಯಣಪುರ ಕಾಲುವೆ ನೀರಿಗಾಗಿ ರೈತರ ಹೋರಾಟಕ್ಕೆ ಸ್ಪಂದನೆ - ಧರಣಿ ತಾತ್ಕಾಲಿಕವಾಗಿ ಅಂತ್ಯ

ದೇವದುರ್ಗ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ದೇವದುರ್ಗ ತಾಲೂಕು ಘಟಕದ ನೇತೃತ್ವದಲ್ಲಿ ನಾರಾಯಣಪುರ ಬಲದಂಡೆ ಕಾಲುವೆ ನೀರಿಗಾಗಿ ನ.14ರಂದು ಬೃಹತ್ ಮಟ್ಟದ ಹೋರಾಟ ಹಾಗೂ ರಸ್ತೆ ತಡೆ ನಡೆಸಲಾಯಿತು.

ಅಂದು ಅಧಿಕಾರಿಗಳಿಂದ ಸಮರ್ಪಕ ಭರವಸೆ ದೊರೆಯದ ಹಿನ್ನೆಲೆಯಲ್ಲಿ, ರೈತರ ಹಿತದೃಷ್ಟಿಯಿಂದ ಅನಿರ್ದಿಷ್ಟಾವಧಿ ಸತ್ಯಾಗ್ರಹ ಧರಣಿಯನ್ನು ಆರಂಭಿಸಲಾಯಿತು. ಸತತ ಮೂರು ದಿನಗಳಿಂದ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯಿತು.

ಈ ಸಂದರ್ಭದಲ್ಲಿ ನಾರಾಯಣಪುರ ನೀರಾವರಿ ಅಧಿಕಾರಿಗಳು ನಮ್ಮ ಹೋರಾಟದ ವೇದಿಕೆಗೆ ಆಗಮಿಸಿದಾಗ, ಕಾಲುವೆಯಲ್ಲಿ ಲಭ್ಯವಿರುವ ನೀರಿನ ಪ್ರಮಾಣ, ರೈತರಿಗೆ ಹಂಚಿಕೆಯಾಗಬೇಕಾದ ನೀರು ಹಾಗೂ ನೀರು ಬಿಡುಗಡೆ ಮಾಡುವ ಕುರಿತು ನಮ್ಮ ಸಂಘದ ಪದಾಧಿಕಾರಿಗಳು ಸ್ಪಷ್ಟವಾದ ಮಾಹಿತಿ ಮತ್ತು ಪ್ರಶ್ನೆಗಳನ್ನು ಮುಂದಿಟ್ಟರು. ಆರಂಭದಲ್ಲಿ ಸಮರ್ಪಕ ಉತ್ತರ ದೊರೆಯದಿದ್ದರೂ, ಸಂಘದ ಪದಾಧಿಕಾರಿಗಳು ದಾಖಲೆ ಮತ್ತು ಮಾಹಿತಿಯೊಂದಿಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ ನಂತರ ಅಧಿಕಾರಿಗಳು ರೈತರಿಗೆ ನೀರು ಬಿಡುಗಡೆ ಮಾಡುವುದಾಗಿ ಒಪ್ಪಿಗೆ ಹಾಗೂ ಭರವಸೆ ನೀಡಿದರು.

ನಂತರ ನಮ್ಮ ಹೋರಾಟದ ಉದ್ದೇಶ ಮತ್ತು ರೈತರ ಪರವಾಗಿ ಪದಾಧಿಕಾರಿಗಳು ಮಂಡಿಸಿದ ವಿಚಾರಗಳನ್ನು ಅರಿತುಕೊಂಡು ಮಾನ್ಯ ಶಾಸಕರಾದ ಶ್ರೀಮತಿ ಜಿ. ಕರಿಯಮ್ಮ ನಾಯಕ್ ಅವರು ಧರಣಿ ಸ್ಥಳಕ್ಕೆ ಆಗಮಿಸಿ ನಮ್ಮ ವೇದಿಕೆಗೆ ಗೌರವ ಸಲ್ಲಿಸಿ, ರೈತರೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ನಮ್ಮ ಸಂಘದ ಹೋರಾಟದ ಪ್ರಾಮಾಣಿಕತೆ, ಪದಾಧಿಕಾರಿಗಳ ಸ್ಪಷ್ಟತೆ ಹಾಗೂ ಬದ್ಧತೆಯನ್ನು ಮೆಚ್ಚಿ, ನಿಮ್ಮಂತಹ ಯುವಕರು ನಮ್ಮ ತಾಲೂಕಿಗೆ ಬೇಕು ಎಂದು ಸಂತೋಷದಿಂದ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅಂತಿಮವಾಗಿ ಅಧಿಕಾರಿಗಳು ಕಾಲುವೆ ನೀರು ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ, ನಮ್ಮ ಜಿಲ್ಲಾ ಅಧ್ಯಕ್ಷರು, ಗೌರವ ಅಧ್ಯಕ್ಷರು, ಜಿಲ್ಲಾ ಉಪಾಧ್ಯಕ್ಷರು ಹಾಗೂ ತಾಲೂಕು ಅಧ್ಯಕ್ಷರ ನೇತೃತ್ವದಲ್ಲಿ ಇಂದು ಮೂರು ದಿನಗಳ ಅನಿರ್ದಿಷ್ಟಾವಧಿ ಧರಣಿಯನ್ನು ತಾತ್ಕಾಲಿಕವಾಗಿ ಕೈಬಿಡಲಾಯಿತು.

ನಮ್ಮ ಹೋರಾಟ ಅಧಿಕಾರಕ್ಕಾಗಿ ಅಲ್ಲ, ರೈತರ ಬದುಕಿಗಾಗಿ. ನಮ್ಮ ಹೋರಾಟ ಯಾರ ವಿರುದ್ಧವೂ ಅಲ್ಲ, ರೈತರಿಗೆ ಸಿಗಬೇಕಾದ ನ್ಯಾಯಯುತ ನೀರಿಗಾಗಿ.

ಈ ಮೂರು ದಿನಗಳ ಹೋರಾಟದಲ್ಲಿ ಹಗಲು-ರಾತ್ರಿ ನಮ್ಮೊಂದಿಗೆ ನಿಂತು ಸಹಕರಿಸಿದ ಸಮಸ್ತ ಅನ್ನದಾತರಿಗೆ, ರೈತ ಬಾಂಧವರಿಗೆ, ವ್ಯಾಪಾರಸ್ಥರಿಗೆ, ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಹಾಗೂ ಬೆಂಬಲಿಸಿದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳು ತಿಳಿಸಿದ ರೈತ ನಾಯಕರು.

— Ningappa

ಒಂಟಿ ಮಹಿಳೆಯರ ಸಮಾವೇಶ - ಒಂಟಿ ಮಹಿಳೆಯರ ಮೇಲಿನ ಲಿಂಗ ತಾರತಮ್ಯ, ಸಾಮಾಜಿಕ ಬಹಿಷ್ಕಾರ, ಶೋಷಣೆ ಕೊನೆಗಾಣಿಸಲು ಸಂಘಟಿತ ಹೋರಾಟಕ್ಕೆ ಕರೆ - 50 ವರ್ಷದೊಳಗಿನ ಒಂಟಿ ಮಹಿಳೆಯರಿಗೆ 10 ಲಕ್ಷ ಇಡುಗಂಟು, ಮಾಸಿಕ 10 ಸಾವಿರ ಭತ್ಯೆಗೆ ಒತ್ತಾಯ - ಡಿ.16, 17ರ ಬೆಂಗಳೂರು ಚಲೋಗೆ ಕರೆ



ರಾಯಚೂರಿನಲ್ಲಿ ಜಿಲ್ಲಾ ಮಟ್ಟದ ಒಂಟಿ ಮಹಿಳೆಯರ ಸಮಾವೇಶ - ತಾರತಮ್ಯ ವಿರುದ್ಧ ಸಂಘಟಿತ ಹೋರಾಟಕ್ಕೆ ಕರೆ

ರಾಯಚೂರು: ಸಮಾಜದಲ್ಲಿ ಒಂಟಿ ಮಹಿಳೆಯರು ಎದುರಿಸುತ್ತಿರುವ ಲಿಂಗ ತಾರತಮ್ಯ, ಸಾಮಾಜಿಕ ಬಹಿಷ್ಕಾರ ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಶೋಷಣೆಯನ್ನು ಕೊನೆಗಾಣಿಸಲು ಸಂಘಟಿತ ಹೋರಾಟ ಅಗತ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಒಂಟಿ ಮಹಿಳೆಯರ ಸಂರಕ್ಷಣ ಸಂಘದ ರಾಜ್ಯ ಸಂಚಾಲಕಿ ಬಿ. ಮಾಳಮ್ಮ ಹೇಳಿದರು.

ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ ನ.15ರಂದು ಆಯೋಜಿಸಿದ್ದ ಜಿಲ್ಲಾ ಮಟ್ಟದ ಒಂಟಿ ಮಹಿಳೆಯರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ವಿಧವೆಯರು, ಅವಿವಾಹಿತರು ಹಾಗೂ ಪತಿಯಿಂದ ದೂರವಾದ ಮಹಿಳೆಯರು ಸಮಾಜದಲ್ಲಿ ನಿರಂತರ ಅವಮಾನ, ನಿರ್ಲಕ್ಷ್ಯ ಮತ್ತು ದೌರ್ಜನ್ಯಗಳನ್ನು ಎದುರಿಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಪುರುಷರು ಮರುಮದುವೆಯಾದರೆ ಸಮಾಜ ಸ್ವಾಗತಿಸುತ್ತದೆ. ಆದರೆ ಮಹಿಳೆಯರು ಮರುಮದುವೆಗೆ ಮುಂದಾದಾಗ ವಿರೋಧ ವ್ಯಕ್ತವಾಗುತ್ತದೆ. ವಿಧವೆಯರ ಕೈಬಳೆ, ಕುಂಕುಮ ತೆಗೆಸುವುದು ಹಾಗೂ ಶುಭ ಸಮಾರಂಭಗಳಿಂದ ದೂರವಿಡುವಂತಹ ಅಮಾನವೀಯ ಪದ್ಧತಿಗಳನ್ನು ನಿರ್ಮೂಲನೆ ಮಾಡಬೇಕು. ಮಹಿಳೆಯರು ಸ್ವಾಭಿಮಾನ ಮತ್ತು ಘನತೆಯಿಂದ ಬದುಕಲು ಸಂಘಟಿತರಾಗಬೇಕು ಎಂದು ಕರೆ ನೀಡಿದರು.

ಸಮಾವೇಶದಲ್ಲಿ ಮಾತನಾಡಿದ ಎಚ್. ಪದ್ಮಾ, ಒಂಟಿ ಮಹಿಳೆಯರ ಆರ್ಥಿಕ ಭದ್ರತೆಗಾಗಿ ಸರ್ಕಾರ ವಿಶೇಷ ಯೋಜನೆಗಳನ್ನು ಜಾರಿಗೊಳಿಸಬೇಕು. 50 ವರ್ಷದೊಳಗಿನ ಒಂಟಿ ಮಹಿಳೆಯರಿಗೆ 10 ಲಕ್ಷ ಇಡುಗಂಟು, ನಿರುದ್ಯೋಗಿ ಮಹಿಳೆಯರಿಗೆ ಮಾಸಿಕ 10 ಸಾವಿರ ಭತ್ಯೆ ಹಾಗೂ ವಿದ್ಯಾವಂತರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಸ್ವಯಂ ಉದ್ಯೋಗಕ್ಕೆ ಶೇ.75ರಷ್ಟು ಸಹಾಯಧನ ಹಾಗೂ ಉಳಿದ ಶೇ.25ರಷ್ಟು ಮೊತ್ತಕ್ಕೆ ಐದು ವರ್ಷಗಳ ಬಡ್ಡಿರಹಿತ ಸಾಲದೊಂದಿಗೆ ಗರಿಷ್ಠ 10 ಲಕ್ಷ ಆರ್ಥಿಕ ನೆರವು ನೀಡಬೇಕು. ಮರುಮದುವೆಗೆ ಪ್ರೋತ್ಸಾಹಧನ ಹಾಗೂ ಮಕ್ಕಳ ಶಿಕ್ಷಣಕ್ಕೂ ನೆರವು ಒದಗಿಸಬೇಕು ಎಂದು ಆಗ್ರಹಿಸಿದರು.

ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಡಿ.16 ಮತ್ತು 17ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಬೆಂಗಳೂರು ಚಲೋ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ ನೀಡಲಾಯಿತು.

ಸಮಾವೇಶದಲ್ಲಿ ಕೆ.ಜಿ. ವೀರೇಶ, ಜನಾರ್ದನ, ಜಿಲಾನಿ ಪಾಷಾ, ಶರಣಮ್ಮ ಹಾಗೂ ನರಸಮ್ಮ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ 21 ಸದಸ್ಯರ ಜಿಲ್ಲಾ ಸಮಿತಿ ರಚಿಸಲಾಯಿತು.

— Ningappa

ಸ್ವಾಗತ ಹಾಗೂ ಸನ್ಮಾನ - ನೀರಿಗಾಗಿ ಬೃಹತ್ ರೈತ ಪಾದಯಾತ್ರೆಯೊಂದಿಗೆ ಆಗಮಿಸಿದ ಹೋರಾಟಗಾರರಿಗೆ ಸ್ಥಳೀಯ ರೈತರು, ಮುಖಂಡರಿಂದ ಗೌರವ - ರೈತರ ಹಕ್ಕು, ನೀರಾವರಿ ಹೋರಾಟಕ್ಕೆ ದೇವದುರ್ಗದ ರೈತರಿಂದ ಪ್ರೀತಿ, ಬೆಂಬಲ



ದೇವದುರ್ಗದಲ್ಲಿ ರೈತರಿಗೆ ಆತ್ಮೀಯ ಸ್ವಾಗತ ಹಾಗೂ ಸನ್ಮಾನ - ನೀರಿಗಾಗಿ ಪಾದಯಾತ್ರೆ ಹೋರಾಟಗಾರರಿಗೆ ಗೌರವ

ದೇವದುರ್ಗ: ನೀರಿಗಾಗಿ ಬೃಹತ್ ರೈತರ ಪಾದಯಾತ್ರೆಯೊಂದಿಗೆ ದೇವದುರ್ಗಕ್ಕೆ ಆಗಮಿಸಿದ ರೈತ ಹೋರಾಟಗಾರರನ್ನು ಸ್ಥಳೀಯ ರೈತರು ಹಾಗೂ ಮುಖಂಡರು ಆತ್ಮೀಯವಾಗಿ ಸ್ವಾಗತಿಸಿ, ಗೌರವಪೂರ್ವಕವಾಗಿ ಸನ್ಮಾನಿಸಿದರು.


ರೈತರ ಹಕ್ಕು, ನೀರಾವರಿ ಮತ್ತು ಅನ್ನದಾತರ ಬದುಕಿಗಾಗಿ ನಡೆಯುತ್ತಿರುವ ಈ ಹೋರಾಟಕ್ಕೆ ದೇವದುರ್ಗದ ರೈತರಿಂದ ದೊರೆತ ಪ್ರೀತಿ, ಗೌರವ ಹಾಗೂ ಬೆಂಬಲ ಹೋರಾಟಗಾರರಲ್ಲಿ ಮತ್ತಷ್ಟು ಉತ್ಸಾಹ ತುಂಬಿದೆ.

ನೀರು ನಮ್ಮ ಹಕ್ಕು - ರೈತರ ಉಳಿವಿಗಾಗಿ ನಮ್ಮ ಹೋರಾಟ ಎಂಬ ಘೋಷಣೆಯೊಂದಿಗೆ ಪಾದಯಾತ್ರೆ ಮುಂದುವರಿಯಿತು.

— Ningappa

NATIONAL

ರಾಷ್ಟ್ರೀಯ ಸ್ವಯಂಸೇವಕ ಸಂಘದ 101ನೇ ವರ್ಷದ ಸಂಸ್ಥಾಪನಾ ಸಂಭ್ರಮದ ಹಿನ್ನೆಲೆಯಲ್ಲಿ ಇಂದು ಸ್ವಕ್ಷೇತ್ರ ಶಿಕಾರಿಪುರದಲ್ಲಿ



ರಾಷ್ಟ್ರೀಯ ಸ್ವಯಂಸೇವಕ ಸಂಘದ 101ನೇ ವರ್ಷದ ಸಂಸ್ಥಾಪನಾ ಸಂಭ್ರಮದ ಹಿನ್ನೆಲೆಯಲ್ಲಿ ಇಂದು ಸ್ವಕ್ಷೇತ್ರ ಶಿಕಾರಿಪುರದಲ್ಲಿ ಆಯೋಜಿಸಲಾಗಿದ್ದ ಭವ್ಯ ಪಥಸಂಚಲನದಲ್ಲಿ ಸಹಸ್ರಾರು ಸಂಖ್ಯೆಯ ಗಣವೇಷಧಾರಿಯಾಗಿ ಸ್ವಯಂಸೇವಕರೊಂದಿಗೆ ಹೆಮ್ಮೆಯಿಂದ ಪಾಲ್ಗೊಳ್ಳಲಾಯಿತು. ಸಮಾಜದಲ್ಲಿ ಏಕತೆ ಹಾಗೂ ರಾಷ್ಟ್ರನಿರ್ಮಾಣದ ಸಂಕಲ್ಪದೊಂದಿಗೆ, ಶಿಸ್ತು, ಸೇವೆ, ಸಂಘಟನೆ ಮತ್ತು ರಾಷ್ಟ್ರಭಕ್ತಿಯ ಪ್ರತಿಜ್ಞೆ ತೊಟ್ಟ ಸ್ವಯಂಸೇವಕರೊಂದಿಗೆ ಕೂಡಿ ಹೆಜ್ಜೆ ಹಾಕಲಾಯಿತು. ಪಥಸಂಚಲನದಲ್ಲಿ ಪಾಲ್ಗೊಂಡ, ಮಾತೃಭೂಮಿಯ ಸೇವೆಗೆ ಸದಾ ಸನ್ನದ್ಧರಾಗಿರುವ ಎಲ್ಲಾ ನಮ್ಮ ಸ್ವಯಂಸೇವಕ ಬಂಧುಗಳಿಗೆ ಹಾರ್ದಿಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

#RSS

— ಕೆ ಆರ್ ಸುರೇಶ್

LOCAL

ರಾಜಕುಮಾರ ವಿಲಿಯಂ, ರಾಜಕುಮಾರಿ ಕೇಟ್ ಮುಂಬೈಯಲ್ಲಿ ಗಲ್ಲಿ ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್ ಜೊತೆ ಸಂಭ್ರಮಿಸಿದರು



ಮೂರು ದಿನಗಳ ಭಾರತ ಪ್ರವಾಸದ ಭಾಗವಾಗಿ ಬ್ರಿಟನ್ ರಾಜಕುಮಾರ ವಿಲಿಯಂ ಮತ್ತು ರಾಜಕುಮಾರಿ ಕೇಟ್ ಮಿಡಲ್ಟನ್ ಇಂದು ಬೆಳಗ್ಗೆ ಮುಂಬೈನ ಬಲ್ಲಾರ್ಡ್ ಎಸ್ಟೇಟ್‌ನಲ್ಲಿ ಗಲ್ಲಿ ಕ್ರಿಕೆಟ್ ಆಡಿದರು. ತೆಂಡೂಲ್ಕರ್ ಹಾಗೂ ಶಾಲಾ ಮಕ್ಕಳೂ ಭಾಗವಹಿಸಿದರು.

ಮುಂಬೈಯಲ್ಲಿ ನಡೆದ ಈ ಕಾರ್ಯಕ್ರಮವು ರಾಜಕುಮಾರರ ಭಾರತದ ಪ್ರವಾಸದ ಒಂದು ಮುಖ್ಯ ಹಂತವಾಗಿದ್ದು, ಕ್ರಿಕೆಟ್ ಮೂಲಕ ಸಂಸ್ಕೃತಿ ವಿನಿಮಯಕ್ಕೆ ಸಹಾಯ ಮಾಡಿತು.

ಬಲ್ಲಾರ್ಡ್ ಎಸ್ಟೇಟ್, ಮುಂಬೈ, ಈ ಕಾರ್ಯಕ್ರಮದ ಸ್ಥಳವಾಗಿತ್ತು.

— Ganesh S

SPORTS

ರಜತ್ ಪಾಟಿದಾರ್ 135 ರನ್, 48 ಎಸೆತಗಳಲ್ಲಿ ಸ್ಫೋಟಕ ಶತಕ, ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ 2ನೇ ಸುತ್ತಿನಲ್ಲಿ



ಇಂದು ನಡೆಯುತ್ತಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯ ಎರಡನೇ ಸುತ್ತಿನ ಪಂದ್ಯದಲ್ಲಿ, ಮಧ್ಯಪ್ರದೇಶದ ರಜತ್ ಪಾಟಿದಾರ್ ಅಬ್ಬರಿಸಿದ ಪ್ರದರ್ಶನ ನೀಡಿದರು.

48 ಎಸೆತಗಳಲ್ಲಿ 135 ರನ್ ಗಳಿಸಿ, ಪಾಟಿದಾರ್ ಸ್ಫೋಟಕ ಶತಕವನ್ನು ಹೊಡೆದು, ತಂಡಕ್ಕೆ ದೊಡ್ಡ ಮುನ್ನಡೆ ನೀಡಿದರು.

ಈ ಶತಕವು ತಂಡದ ಒಟ್ಟು ಅಂಕಗಳನ್ನು ಹೆಚ್ಚಿಸಿ, ಎದುರಾಳಿಗಳ ಮೇಲೆ ಒತ್ತಡವನ್ನು ಹೆಚ್ಚಿಸಿತು.

ಟೂರ್ನಿಯ ಮುಂದಿನ ಹಂತಗಳಿಗೆ ಮಧ್ಯಪ್ರದೇಶವು ಈ ಜಯದೊಂದಿಗೆ ಉತ್ತಮ ಸ್ಥಿತಿಯಲ್ಲಿ ಮುಂದುವರಿಯಲಿದೆ.

— Ganesh S

SPORTS

ಕರ್ನಾಟಕ ತಂಡವು ಉತ್ತರ ಪ್ರದೇಶವನ್ನು ವಾಂಖೆಡೆ ಕ್ರೀಡಾಂಗಣದಲ್ಲಿ ಎದುರಿಸಿತು



ಕರ್ನಾಟಕ ಕ್ರಿಕೆಟ್ ತಂಡವು ಇಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಎರಡನೇ ಪಂದ್ಯದಲ್ಲಿ ಉತ್ತರ ಪ್ರದೇಶ ತಂಡವನ್ನು ಎದುರಿಸಲಿದೆ.

ಮುಂದಿನ ಮೊದಲ ಪಂದ್ಯದಲ್ಲಿ ಕರ್ನಾಟಕವು ಬಂಗಾಳ ವಿರುದ್ಧ ಭರ್ಜರಿ ಜಯ ಸಾಧಿಸಿ ಟೂರ್ನಮೆಂಟ್‌ನಲ್ಲಿ ಉತ್ತಮ ಪ್ರಾರಂಭವನ್ನು ಮಾಡಿದೆ.


ಈ ಜಯದ ಪ್ರೇರಣೆಯಿಂದ ತಂಡವು ಉತ್ತರ ಪ್ರದೇಶದ ವಿರುದ್ಧವೂ ಸಮಾನ ಮಟ್ಟದ ಪ್ರದರ್ಶನ ನೀಡುವ ನಿರೀಕ್ಷೆ ಇದೆ. ಎರಡೂ ತಂಡಗಳಲ್ಲಿಯೂ ಪ್ರಮುಖ ಆಟಗಾರರು ತಮ್ಮ ಶ್ರೇಷ್ಠತೆಯನ್ನು ಪ್ರದರ್ಶಿಸಲು ಸಿದ್ಧರಾಗಿದ್ದಾರೆ.

ಪಂದ್ಯವು ಸಂಜೆ ವೇಳೆಗೆ ಪ್ರಾರಂಭವಾಗುವ ನಿರೀಕ್ಷೆ ಇದೆ, ಪ್ರೇಕ್ಷಕರು ಮತ್ತು ಅಭಿಮಾನಿಗಳು ಈ ಸ್ಪರ್ಧಾತ್ಮಕ ಮುಖಾಮುಖಿಯನ್ನು ಕಾತರದಿಂದ ಕಾಯುತ್ತಿದ್ದಾರೆ.

— Ganesh S

SPORTS

ಬಾಂಗ್ಲಾದೇಶ ಮತ್ತು ಅಮೆರಿಕ 2028 ಲಾಸ್ ಏಂಜಲೀಸ್ ಒಲಿಂಪಿಕ್ಸ್ ಕ್ರಿಕೆಟ್ ಅರ್ಹತಾ ಪಂದ್ಯಗಳ ಆತಿಥ್ಯ



ಐಸಿಸಿ (ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ) 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಕ್ರಿಕೆಟ್ ಕ್ರೀಡೆಯ ಪುರುಷರ ಅಂತಿಮ ಅರ್ಹತಾ ಸುತ್ತಿನ ಪಂದ್ಯಗಳಿಗೆ ಬಾಂಗ್ಲಾದೇಶ, ಹಾಗೂ ಮಹಿಳೆಯರ ಅರ್ಹತಾ ಪಂದ್ಯಗಳಿಗೆ ಅಮೆರಿಕವನ್ನು ಆಯ್ಕೆ ಮಾಡಿದೆ ಎಂದು ಅಧಿಕೃತವಾಗಿ ಪ್ರಕಟಿಸಿದೆ.

ಲಾಸ್ ಏಂಜಲೀಸ್‌ನಲ್ಲಿ ನಡೆಯುವ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಕ್ರೀಡೆಯ ಪುನಃ ಪ್ರಾರಂಭವನ್ನು ಸೂಚಿಸುತ್ತದೆ. ಪುರುಷರ ಅಂತಿಮ ಅರ್ಹತಾ ಸುತ್ತು ಬಾಂಗ್ಲಾದೇಶದಲ್ಲಿ ನಡೆಸಲ್ಪಡುವುದು, ಇದರಿಂದ ಏಷ್ಯಾ ಮತ್ತು ಆಫ್ರಿಕಾ ಪ್ರದೇಶಗಳ ತಂಡಗಳು ಈ ಹಂತದಲ್ಲಿ ಸ್ಪರ್ಧಿಸಿಕೊಳ್ಳುವ ಅವಕಾಶವನ್ನು ಪಡೆಯುತ್ತವೆ.

ಮಹಿಳೆಯರ ಅರ್ಹತಾ ಪಂದ್ಯಗಳು ಅಮೆರಿಕದಲ್ಲಿ ಆಯೋಜಿಸಲಾಗುತ್ತದೆ, ಇದರಿಂದ ಉತ್ತರ ಅಮೆರಿಕಾ ಮತ್ತು ಇತರ ಖಂಡಗಳ ತಂಡಗಳು ತಮ್ಮ ಸ್ಥಾನವನ್ನು ಖಚಿತಪಡಿಸಿಕೊಳ್ಳಲು ಸ್ಪರ್ಧಿಸಬಹುದು. ಈ ಆಯೋಜನೆಗಳು ಕ್ರಿಕೆಟ್ ಕ್ರೀಡೆಯ ವಿಶ್ವವ್ಯಾಪಿ ವೃದ್ಧಿ ಮತ್ತು ಮಹಿಳಾ ಕ್ರೀಡಾಪಟುಗಳ ಪ್ರೋತ್ಸಾಹಕ್ಕೆ ಮಹತ್ವದ ಹೆಜ್ಜೆ ಎಂದು ಪರಿಗಣಿಸಲಾಗುತ್ತಿದೆ.

ಐಸಿಸಿ ಈ ಕಾರ್ಯಕ್ರಮಗಳ ನಿರ್ವಹಣೆಗೆ ಅಗತ್ಯವಾದ ಮೂಲಸೌಕರ್ಯ, ಭದ್ರತೆ ಮತ್ತು ಸ್ಪರ್ಧಾತ್ಮಕ ಮಾನದಂಡಗಳನ್ನು ಪೂರೈಸುವಂತೆ ಖಚಿತಪಡಿಸಿಕೊಳ್ಳುವುದಾಗಿ ತಿಳಿಸಿದೆ. ಈ ಅರ್ಹತಾ ಪಂದ್ಯಗಳು ಅಂತಿಮವಾಗಿ 2028ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ತಂಡಗಳ ಆಯ್ಕೆಗೆ ನಿರ್ಣಾಯಕವಾಗಿರುತ್ತದೆ.

— Ganesh S

SPORTS

ಭಾರತ-ನ್ಯೂಜಿಲೆಂಡ್ ಮೊದಲ ಟೆಸ್ಟ್ ಪಂದ್ಯ ವೆಲ್ಲಿಂಗ್ಟನ್‌ನಲ್ಲಿ ನವೆಂಬರ್ 19 ರಂದು ಆರಂಭ



ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಮೊದಲ ಟೆಸ್ಟ್ ಪಂದ್ಯ ನವೆಂಬರ್ 19 ರಂದು ವೆಲ್ಲಿಂಗ್ಟನ್‌ನ ಪ್ರಸಿದ್ಧ ಬೇಸಿನ್ ರಿಸರ್ವ್ ಮೈದಾನದಲ್ಲಿ ಆರಂಭವಾಗಲಿದೆ. ಈ ಪಂದ್ಯವು ಎರಡೂ ತಂಡಗಳಿಗಾಗಿ ಮಹತ್ವದ ಆರಂಭವಾಗಿದ್ದು, ಟೆಸ್ಟ್ ಸರಣಿಯ ಮೊದಲ ಹಂತವನ್ನು ಗುರುತಿಸುತ್ತದೆ.

ಇತ್ತೀಚೆಗೆ ಏಕದಿನ ಸರಣಿ ಗೆದ್ದ ಉತ್ಸಾಹದಲ್ಲಿರುವ ಟೀಮ್ ಇಂಡಿಯಾ, ಈ ಟೆಸ್ಟ್‌ನಲ್ಲಿ ತಮ್ಮ ಪ್ರಭಾವವನ್ನು ಮುಂದುವರಿಸಲು ಪ್ರಯತ್ನಿಸುತ್ತಿದೆ. ನ್ಯೂಜಿಲೆಂಡ್ ತಂಡವೂ ಸ್ಥಳೀಯ ಬೆಂಬಲವನ್ನು ಪಡೆದು, ಶಕ್ತಿಯುತ ಪ್ರದರ್ಶನ ನೀಡುವ ನಿರೀಕ್ಷೆ ಇದೆ.

ಬೇಸಿನ್ ರಿಸರ್ವ್, ತನ್ನ ಸುಂದರ ಪರಿಸರ ಮತ್ತು ಉತ್ತಮ ಪಿಚ್‌ಗಾಗಿ ಪ್ರಸಿದ್ಧ, ಈ ಪಂದ್ಯಕ್ಕೆ ಸೂಕ್ತ ವಾತಾವರಣವನ್ನು ಒದಗಿಸುತ್ತದೆ. ಅಭಿಮಾನಿಗಳು ಮತ್ತು ಮಾಧ್ಯಮಗಳು ಈ ಮೊದಲ ಟೆಸ್ಟ್‌ಗೆ ಹೆಚ್ಚಿನ ಗಮನ ಹರಿಸುತ್ತಿದ್ದು, ಪಂದ್ಯಾವಳಿಯ ಪ್ರಗತಿಯನ್ನು ಹತ್ತಿರದಿಂದ ಅನುಸರಿಸುತ್ತಾರೆ.

— Ganesh S

SPORTS

ಕರ್ನಾಟಕ ಮಹಿಳಾ ತಂಡ ಅಹಮದಾಬಾದ್‌ನಲ್ಲಿ ವಿದರ್ಭನ್ನು ಎದುರಿಸುತ್ತದೆ



ಬಿಸಿಸಿಐ ಆಯೋಜಿಸಿರುವ ಹಿರಿಯ ಮಹಿಳಾ ಟಿ20 ಟ್ರೋಫಿಯ ಎಲೈಟ್ ಗುಂಪು ಪಂದ್ಯದಲ್ಲಿ ಇಂದು ಪ್ರಮುಖ ಮುಖಾಮುಖಿ ನಡೆಯಲಿದೆ. ಈ ಪಂದ್ಯ ಅಹಮದಾಬಾದ್‌ನಲ್ಲಿ ನಡೆಯುತ್ತಿದೆ ಮತ್ತು ಕರ್ನಾಟಕ ಮಹಿಳಾ ಕ್ರಿಕೆಟ್ ತಂಡವು ವಿದರ್ಭ ತಂಡವನ್ನು ಎದುರಿಸುವುದು.

ಇದು ಎರಡೂ ತಂಡಗಳಿಗಾಗಿ ಟೂರ್ನಮೆಂಟ್‌ನಲ್ಲಿ ಪ್ರಮುಖ ಹಂತವಾಗಿದ್ದು, ಪ್ರತಿ ತಂಡವೂ ತಮ್ಮ ಸ್ಥಾನವನ್ನು ಬಲಪಡಿಸಲು ಪ್ರಯತ್ನಿಸುತ್ತಿದೆ. ಪಂದ್ಯವು ಟಿ20 ಸ್ವರೂಪದಲ್ಲಿ ನಡೆಯುವ ಕಾರಣ, ಪ್ರೇಕ್ಷಕರು ಉತ್ಸಾಹಭರಿತ ಕ್ರಿಯಾಶೀಲತೆಯನ್ನು ನಿರೀಕ್ಷಿಸಬಹುದು.

ಆಯೋಜಕರು ಮತ್ತು ಪ್ರೇಕ್ಷಕರು ಈ ಪಂದ್ಯವನ್ನು ಗಮನಿಸುತ್ತಿದ್ದು, ಎರಡೂ ತಂಡಗಳ ಪ್ರದರ್ಶನವನ್ನು ಸಮೀಪದಿಂದ ಅನುಸರಿಸುವರು.

ENTERTAINMENT

ಅಜಿತ್ ಕುಮಾರ್ ನಟನೆಯ 'ಡೇರ್‌ಡೆವಿಲ್' ಚಿತ್ರದಲ್ಲಿ ಶಿವರಾಜ್ ಕುಮಾರ್ ಪ್ರಮುಖ ಖಳನಾಯಕನಾಗಿ



ಅಧಿಕ್ ರವಿಚಂದ್ರನ್ ನಿರ್ದೇಶನದ ಬಹುನಿರೀಕ್ಷಿತ ತಮಿಳು ಚಿತ್ರ 'ಡೇರ್‌ಡೆವಿಲ್' (DareDevil) ನಲ್ಲಿ ಅಜಿತ್ ಕುಮಾರ್ ಮುಖ್ಯ ಪಾತ್ರದಲ್ಲಿ ನಟಿಸುವುದನ್ನು ಚಿತ್ರತಂಡ ಅಧಿಕೃತವಾಗಿ ಖಚಿತಪಡಿಸಿದೆ. ಇದರಲ್ಲಿ ಸೆಂಚುರಿ ಸ್ಟಾರ್ ಶಿವರಾಜ್ ಕುಮಾರ್ ಪ್ರಮುಖ ಖಳನಾಯಕ (ವಿಲನ್) ಪಾತ್ರವನ್ನು ನಿರ್ವಹಿಸುವರು ಎಂದು ತಿಳಿದುಬಂದಿದೆ.

ಶಿವರಾಜ್ ಕುಮಾರ್, ಹಿಂದಿನ ದಿನಗಳಲ್ಲಿ ಹೀರೋ ಪಾತ್ರಗಳಿಗಾಗಿ ಪ್ರಸಿದ್ಧರಾಗಿದ್ದರೂ, ಈ ಬಾರಿ ಖಳನಾಯಕನಾಗಿ ಪ್ರೇಕ್ಷಕರ ಮುಂದೆ ಕಾಣಿಸಿಕೊಳ್ಳುವ ಮೂಲಕ ಹೊಸ ಸವಾಲನ್ನು ಸ್ವೀಕರಿಸುತ್ತಿದ್ದಾರೆ. ಈ ನಿರ್ಧಾರವು ಚಿತ್ರ ಪ್ರೇಕ್ಷಕರಲ್ಲಿ ಮತ್ತು ಅಭಿಮಾನಿಗಳಲ್ಲಿ ವಿಶೇಷ ಆಸಕ್ತಿಯನ್ನು ಉಂಟುಮಾಡಿದೆ.

ಚಿತ್ರದ ಚಿತ್ರೀಕರಣ ನವೆಂಬರ್ ಅಂತ್ಯಕ್ಕೆ ಆರಂಭವಾಗುವ ನಿರೀಕ್ಷೆಯಿದೆ. ಈ ಸಮಯದಲ್ಲಿ ಶಿವರಾಜ್ ಕುಮಾರ್ ಚಿತ್ರೀಕರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ಚಿತ್ರ ತಂಡವು ಈ ಸಂಯೋಜನೆ ಮೂಲಕ ಪ್ರೇಕ್ಷಕರಿಗೆ ಹೊಸ ಅನುಭವವನ್ನು ನೀಡುವ ಉದ್ದೇಶವನ್ನು ಹೊಂದಿದೆ.

— Ganesh S

ENTERTAINMENT

ಜಾಗತಿಕ ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆ ಬರೆದ 'ರಾಮಾಯಣ': 1,384 ಕೋಟಿ ರೂ. ಗಳಿಕೆ



ನಿತೇಶ್ ತಿವಾರಿ ನಿರ್ದೇಶನದ ಬಹುನಿರೀಕ್ಷಿತ 'ರಾಮಾಯಣ: ಭಾಗ 1' ಸಿನಿಮಾ ಜಾಗತಿಕ ಬಾಕ್ಸ್ ಆಫೀಸ್‌ನಲ್ಲಿ ಅಭೂತಪೂರ್ವ ಯಶಸ್ಸನ್ನು ದಾಖಲಿಸಿದೆ. ಬಿಡುಗಡೆಯಾದ ಕೇವಲ 11 ದಿನಗಳಲ್ಲಿ ಈ ಚಿತ್ರವು ವಿಶ್ವದಾದ್ಯಂತ ಒಟ್ಟು 1,384 ಕೋಟಿ ರೂಪಾಯಿಗಳ ಗಳಿಕೆಯನ್ನು ದಾಟುವ ಮೂಲಕ ಹೊಸ ದಾಖಲೆ ಸೃಷ್ಟಿಸಿದೆ.

ಚಿತ್ರದ ಗಳಿಕೆಯ ವಿವರಗಳನ್ನು ಗಮನಿಸಿದರೆ, 11ನೇ ದಿನವಾದ ನಿನ್ನೆ ಭಾನುವಾರವೊಂದೇ ದಿನದಲ್ಲಿ ಭಾರತದಲ್ಲಿ 75 ಕೋಟಿ ರೂಪಾಯಿಗಳ ನಿವ್ವಳ ಗಳಿಕೆಯನ್ನು ಮಾಡಿಕೊಂಡಿದೆ. ಪ್ರೇಕ್ಷಕರಿಂದ ಸಿಗುತ್ತಿರುವ ಉತ್ತಮ ಪ್ರತಿಕ್ರಿಯೆಯು ಚಿತ್ರದ ಒಟ್ಟಾರೆ ಕಲೆಕ್ಷನ್ ಅನ್ನು ಗಣನೀಯವಾಗಿ ಹೆಚ್ಚಿಸಿದೆ.

ಕನ್ನಡ ರಾಜ್ಯದಲ್ಲೂ ಈ ಸಿನಿಮಾ ಭರ್ಜರಿ ಯಶಸ್ಸು ಕಂಡಿದ್ದು, ಕನ್ನಡ ಆವೃತ್ತಿಯ ಮೂಲಕ ಇದುವರೆಗೆ ಒಟ್ಟು 63.10 ಕೋಟಿ ರೂಪಾಯಿಗಳ ಕಲೆಕ್ಷನ್ ಸಂಗ್ರಹಿಸಿದೆ.

— Ganesh S

ENTERTAINMENT

ರಾಮಾಯಣ ಚಿತ್ರ 12ನೇ ದಿನದಲ್ಲಿ 600 ಕೋಟಿ ರೂ. ನಿವ್ವಳ ಗಳಿಕೆ, ಎರಡನೇ ಅತಿ ವೇಗದ ಸಿನಿಮಾ



ಹಿಂದಿ ಭಾಷೆಯಲ್ಲಿನ ಮಹಾಕಾವ್ಯ 'ರಾಮಾಯಣ' ಚಿತ್ರವು 12ನೇ ದಿನದಲ್ಲಿ 600 ಕೋಟಿ ರೂ. ನಿವ್ವಳ ಗಳಿಕೆಯ ಗಡಿಯನ್ನು ದಾಟಿದೆ.

ದಿನಗಳಲ್ಲಿ 582.25 ಕೋಟಿ ರೂ. ನಿವ್ವಳ ಗಳಿಸಿದೆ, ಇದು ಪ್ರಾರಂಭಿಕ ದಿನಗಳಲ್ಲೇ ಪ್ರಬಲ ಪ್ರೇಕ್ಷಕ ಆಸಕ್ತಿ ಮತ್ತು ವ್ಯಾಪಕ ವಿತರಣೆಯನ್ನು ಸೂಚಿಸುತ್ತದೆ.

12ನೇ ದಿನದಲ್ಲಿ 600 ಕೋಟಿ ರೂ. ಮೀರಿದ ಈ ಸಾಧನೆ, ಇದುವರೆಗೆ ಈ ಮಟ್ಟವನ್ನು ತಲುಪಿದ ಎರಡನೇ ಅತಿ ವೇಗದ ಚಿತ್ರವೆಂದು ಪರಿಗಣಿಸಲಾಗುತ್ತಿದೆ.

ಈ ಮೈಲಿಗಲ್ಲು ಹಿಂದಿ ಚಿತ್ರರಂಗದಲ್ಲಿ ಹೊಸ ಮಾನದಂಡವನ್ನು ಸ್ಥಾಪಿಸಿದೆ ಮತ್ತು ಭವಿಷ್ಯದ ಬಾಕ್ಸ್‌ಆಫೀಸ್ ನಿರೀಕ್ಷೆಗಳಿಗೆ ಮಾರ್ಗದರ್ಶಕವಾಗಲಿದೆ.

— Ganesh S

ENTERTAINMENT

ಸನ್ನಿ ಡಿಯೋಲ್ ನಟಿಸಿದ 'ಸೂರ್ಯ' ಚಿತ್ರ 2027ರಲ್ಲಿ ಬಿಡುಗಡೆಗೆ ಮುಂದೂಡಿದೆ



ವಿವಾದದ ಹಿನ್ನೆಲೆಯೊಂದಿಗೆ, ಸನ್ನಿ ಡಿಯೋಲ್ ಅಭಿನಯದ 'ಸೂರ್ಯ: ಅಂತ್ಸೆ ಆರಂಭ್ ತಕ್' ಚಿತ್ರದ ಬಿಡುಗಡೆಯನ್ನು 2027ಕ್ಕೆ ಮುಂದೂಡಲಾಗಿದೆ. ಮೂಲತಃ ನವೆಂಬರ್ 20ರಂದು ಬಿಡುಗಡೆಯಾಗಬೇಕೆಂದು ನಿರ್ಧರಿಸಲಾಗಿತ್ತು.

ಚಿತ್ರದ ಟೀಸರ್‌ನಲ್ಲಿ ವೈದ್ಯರ ಮೇಲಿನ ಹಲ್ಲೆ ದೃಶ್ಯಗಳಿರುವುದನ್ನು ಗಮನಿಸಿ, ಭಾರತೀಯ ವೈದ್ಯಕೀಯ ಸಂಘ (IMA) ಆಕ್ಷೇಪ ವ್ಯಕ್ತಪಡಿಸಿದೆ. ಈ ಆಕ್ಷೇಪವನ್ನು ಪರಿಗಣಿಸಿ, ನಿರ್ಮಾಪಕರು ಬಿಡುಗಡೆ ದಿನಾಂಕವನ್ನು ಪುನಃ ನಿಗದಿಪಡಿಸಿದ್ದಾರೆ.

ಪ್ರಸ್ತುತ, ಚಿತ್ರ ನಿರ್ಮಾಣ ತಂಡವು 2027ರಲ್ಲಿ ಪ್ರೇಕ್ಷಕರಿಗೆ ಚಿತ್ರವನ್ನು ಪ್ರದರ್ಶಿಸುವುದಾಗಿ ದೃಢಪಡಿಸಿದೆ, ಮತ್ತು ಯಾವುದೇ ಹೆಚ್ಚುವರಿ ಬದಲಾವಣೆಗಳ ಬಗ್ಗೆ ಮಾಹಿತಿ ನೀಡಿಲ್ಲ.

— Ganesh S

LOCAL

ಬೆಂಗಳೂರಿನ ಪಿಂಕ್ ಲೈನ್ ಮೆಟ್ರೋ ಸಂಚಾರ ಆರಂಭ, ಸಿನಿಪ್ರಿಯರಿಗೆ ಹೆಚ್ಚುವರಿ ಅನುಕೂಲ



ಬೆಂಗಳೂರಿನಲ್ಲಿ ಇಂದಿನಿಂದ ಪಿಂಕ್ ಲೈನ್ ಮೆಟ್ರೋ ಸಂಚಾರ ಅಧಿಕೃತವಾಗಿ ಪ್ರಾರಂಭವಾಗಿದೆ. ಈ ಹೊಸ ಮೆಟ್ರೋ ಮಾರ್ಗವು ನಗರ ಜನಸಂಚಾರ ವ್ಯವಸ್ಥೆಗೆ ಮತ್ತೊಂದು ಪ್ರಮುಖ ಆಯ್ಕೆಯನ್ನು ಸೇರಿಸಿದೆ.

ಪಿಂಕ್ ಲೈನ್ ಬನ್ನೇರುಘಟ್ಟ (Bannerghatta) ರಸ್ತೆಯ ಸಮೀಪದ ಮಾಲ್‌ಗಳು ಮತ್ತು ಮಲ್ಟಿಪ್ಲೆಕ್ಸ್‌ಗಳಿಗೆ ನೇರ ಸಂಪರ್ಕವನ್ನು ಒದಗಿಸುವುದರಿಂದ, ಸಿನಿಪ್ರಿಯರಿಗೆ ಸಂಚಾರದಲ್ಲಿ ಸಮಯ ಮತ್ತು ಪ್ರಯಾಸದ ಉಳಿತಾಯವಾಗುತ್ತದೆ.

ಈ ಆರಂಭದಿಂದ ನಗರದಲ್ಲಿ ಟ್ರಾಫಿಕ್ ಜಾಮ್ ಕಡಿಮೆಯಾಗುವ ನಿರೀಕ್ಷೆ ಇದೆ, ಹಾಗೂ ಸಾರ್ವಜನಿಕ ಸಾರಿಗೆ ಬಳಕೆ ಹೆಚ್ಚಳಕ್ಕೆ ಸಹಕಾರಿಯಾಗುತ್ತದೆ.

— Ganesh S

ಪ್ರೇಮದ ಊರಲ್ಲಿ 50 ದಿನಗಳ ಯಶಸ್ವಿ ಪ್ರದರ್ಶನಕ್ಕೆ ವಿಶೇಷ ಸಂಭ್ರಮಾಚರಣೆ



ಪ್ರೇಮದ ಊರಲ್ಲಿ ಚಿತ್ರವು ಕನ್ನಡ ಚಿತ್ರರಂಗದ ಪ್ರಮುಖ ಹಿಟ್‌ಗಳಲ್ಲೊಂದಾಗಿ, ಬಿಡುಗಡೆಯಿಂದ 50 ದಿನಗಳ ನಿರಂತರ ಯಶಸ್ವಿ ಪ್ರದರ್ಶನವನ್ನು ಸಾಧಿಸಿದೆ. ಈ ಮೈಲಿಗಲ್ಲು ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ನಿರಂತರ ಬೆಂಬಲ ಮತ್ತು ಉತ್ತಮ ಟಿಕೆಟ್ ಮಾರಾಟದ ಫಲಿತಾಂಶವಾಗಿದೆ.


ಚಿತ್ರದ ನಿರ್ಮಾಪಕರು, ನಿರ್ದೇಶಕರು, ನಟ-ನಟಿಯರು ಹಾಗೂ ತಾಂತ್ರಿಕ ಸಿಬ್ಬಂದಿ ಈ ಯಶಸ್ಸನ್ನು ಆಚರಿಸಲು ವಿಶೇಷ ಸಂಭ್ರಮಾಚರಣೆಯನ್ನು ಆಯೋಜಿಸಿದರು. ಕಾರ್ಯಕ್ರಮದಲ್ಲಿ ತಂಡದ ಸದಸ್ಯರು ಪ್ರೇಕ್ಷಕರಿಗೆ ಧನ್ಯವಾದಗಳನ್ನು ತಿಳಿಸಿ, 50 ದಿನಗಳ ಯಶಸ್ವಿ ಪಯಣವನ್ನು ಸ್ಮರಿಸಿದರು.

ಈ ಸಂಭ್ರಮಾಚರಣೆಯ ಮೂಲಕ ಚಿತ್ರವು ಪ್ರೇಕ್ಷಕರ ಹೃದಯದಲ್ಲಿ ಉಳಿದಿರುವ ಪ್ರಭಾವವನ್ನು ಮತ್ತೊಮ್ಮೆ ದೃಢಪಡಿಸಿತು ಮತ್ತು ಕನ್ನಡ ಚಿತ್ರರಂಗದಲ್ಲಿ ಇಂತಹ ಯಶಸ್ಸುಗಳ ಮಹತ್ವವನ್ನು ಹೈಲೈಟ್ ಮಾಡಿತು.

— Ganesh S

SPORTS

ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ಉತ್ತರ ಪ್ರದೇಶ ವಿರುದ್ಧ ಕರ್ನಾಟಕಕ್ಕೆ ರೋಚಕ ಸೋಲು



ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಎಲೈಟ್ ಗ್ರೂಪ್ 'ಎ' ಪಂದ್ಯದಲ್ಲಿ ಉತ್ತರ ಪ್ರದೇಶ ತಂಡದ ವಿರುದ್ಧ ಕರ್ನಾಟಕ ತಂಡವು 16 ರನ್‌ಗಳ ಅಂತರದಿಂದ ಸೋಲನ್ನು ಅನುಭವಿಸಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಇಂದು ಈ ಪಂದ್ಯವು ನಡೆಯಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಉತ್ತರ ಪ್ರದೇಶ ತಂಡವು ನಿಗದಿತ ಓವರ್‌ಗಳಲ್ಲಿ 5 ವಿಕೆಟ್ ನಷ್ಟದೊಂದಿಗೆ 204 ರನ್‌ಗಳನ್ನು ಗಳಿಸಿತು. ಈ ಬೃಹತ್ ಗುರಿಯನ್ನು ಬೆನ್ನಟ್ಟಿದ ಕರ್ನಾಟಕ ತಂಡವು ಹೋರಾಟ ನಡೆಸಿದರೂ ಅಂತಿಮವಾಗಿ ವಿಫಲವಾಯಿತು.

ಕರ್ನಾಟಕ ತಂಡದ ಪರವಾಗಿ ನಾಯಕ ಆರ್. ಸ್ಮರಣ್ 68 ರನ್‌ಗಳ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದರು. ಇವರ ಜೊತೆಗೆ ಲವ್‌ನಿತ್ ಸಿಸೋಡಿಯಾ ಮತ್ತು ಮನ್ವಂತ್ ಕುಮಾರ್ ತಲಾ 42 ರನ್‌ಗಳನ್ನು ಗಳಿಸಿ ತಂಡಕ್ಕೆ ಬೆಂಬಲ ನೀಡಿದರು.

ಆದರೆ, ತಂಡದ ಪ್ರಮುಖ ಬ್ಯಾಟರ್‌ಗಳ ಹೋರಾಟದ ನಡುವೆಯೂ ಕರ್ನಾಟಕ ತಂಡವು 188/9 ರನ್‌ಗಳನ್ನು ಗಳಿಸಲಷ್ಟೇ ಶಕ್ತವಾಯಿತು. ಇದರಿಂದಾಗಿ ತಂಡವು 16 ರನ್‌ಗಳ ಅಂತರದಿಂದ ಪಂದ್ಯವನ್ನು ಕಳೆದುಕೊಂಡಿತು.

— Ganesh S

SPORTS

ಗೌತಮ್ ಗಂಭೀರ್: ಯುವ ವೇಗದ ಬೌಲರ್‌ಗಳ ಪ್ರದರ್ಶನದಿಂದ ಭಾರತ 3-1 ಅಂತರದಲ್ಲಿ ನ್ಯೂಜಿಲೆಂಡ್‌ನಲ್ಲಿ ಐತಿಹಾಸಿಕ ಸರಣಿ ಗೆಲುವು



ಭಾರತ ಕ್ರಿಕೆಟ್ ತಂಡವು ನ್ಯೂಜಿಲೆಂಡ್‌ನಲ್ಲಿ 3-1 ಅಂತರದಲ್ಲಿ ಐತಿಹಾಸಿಕ ಏಕದಿನ ಸರಣಿ ಗೆದ್ದಿದೆ, ಇದು ದೇಶದ ಇತಿಹಾಸದಲ್ಲಿ ಮೊದಲ ಬಾರಿ.

ಬೌಲರ್‌ಗಳ ನಿರಂತರ ಒತ್ತಡ ಮತ್ತು ಯಶಸ್ವಿ ಪ್ರದರ್ಶನವಿದೆ. ಅವರು ವೇಗ, ನಿಖರತೆ ಮತ್ತು ಬದಲಾವಣೆಗಳ ಮೂಲಕ ಎದುರಾಳಿಯ ಬ್ಯಾಟಿಂಗ್‌ನ್ನು ನಿಯಂತ್ರಿಸಿದರು.

ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಬೌಲರ್‌ಗಳ ಕೌಶಲ್ಯ ಮತ್ತು ಆತ್ಮವಿಶ್ವಾಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, "ಬೌಲರ್‌ಗಳೇ ಸರಣಿ ಗೆಲ್ಲಿಸಿಕೊಡುತ್ತಾರೆ" ಎಂದು ಹೇಳಿದರು.

ಗಂಭೀರ್ ಅವರು ತಂಡದ ಭವಿಷ್ಯದ ಬಗ್ಗೆ ಆಶಾವಾದಿ ದೃಷ್ಟಿ ವ್ಯಕ್ತಪಡಿಸಿ, ಯುವ ಬೌಲರ್‌ಗಳ ಅಭಿವೃದ್ಧಿ ಮುಂದುವರಿಯಬೇಕು ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಬೇಕು ಎಂದು ಸೂಚಿಸಿದರು.

— Ganesh S

SPORTS

2029 ಚಾಂಪಿಯನ್ಸ್ ಟ್ರೋಫಿ ಮತ್ತು 2031 ಏಕದಿನ ವಿಶ್ವಕಪ್‌ಗೆ ಭಾರತ ಆತಿಥ್ಯ, ಪಾಕಿಸ್ತಾನಕ್ಕೆ 2031ರವರೆಗೆ ಐಸಿಸಿ ಟೂರ್ನಿ ಇಲ್ಲ



ಐಸಿಸಿ (ICC) 2035ರವರೆಗೆ ನಡೆಯುವ ಪ್ರಮುಖ ಕ್ರಿಕೆಟ್ ಟೂರ್ನಿಗಳ ವೇಳಾಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದೆ. ಇದರಲ್ಲಿ 2029 ಮತ್ತು 2031ರಲ್ಲಿ ನಡೆಯುವ ಎರಡು ಮಹತ್ವದ ಕಾರ್ಯಕ್ರಮಗಳ ಆತಿಥ್ಯ ಭಾರತಕ್ಕೆ ನೀಡಲಾಗಿದೆ.

2029ರಲ್ಲಿ ನಡೆಯುವ ಚಾಂಪಿಯನ್ಸ್ ಟ್ರೋಫಿ ಹಾಗೂ 2031ರಲ್ಲಿ ಆಯೋಜಿಸಲಿರುವ ಏಕದಿನ ವಿಶ್ವಕಪ್ ಎರಡೂ ಭಾರತದಲ್ಲಿ ನಡೆಯುವವು. ಈ ಟೂರ್ನಿಗಳು ಭಾರತೀಯ ಕ್ರಿಕೆಟ್ ಅಭಿಮಾನಿಗಳಿಗಾಗಿ ದೊಡ್ಡ ಉತ್ಸವವಾಗಿದ್ದು, ದೇಶದ ಕ್ರೀಡಾ ಮೂಲಸೌಕರ್ಯ ಮತ್ತು ಅಂತರರಾಷ್ಟ್ರೀಯ ಪ್ರೊಫೈಲ್ ಅನ್ನು ಮತ್ತಷ್ಟು ಹೆಚ್ಚಿಸುವ ನಿರೀಕ್ಷೆ ಇದೆ.

ಇದಕ್ಕೆ ವಿರುದ್ಧವಾಗಿ, ಪಾಕಿಸ್ತಾನಕ್ಕೆ 2031ರವರೆಗೆ ಯಾವುದೇ ಐಸಿಸಿ ಟೂರ್ನಿ ಹಂಚಿಕೊಳ್ಳಲಾಗಿಲ್ಲ. ಇದರಿಂದ ಪಾಕಿಸ್ತಾನದ ಭವಿಷ್ಯದ ಹೋಸ್ಟ್‌ಶಿಪ್‌ಗಳಲ್ಲಿ ವ್ಯತ್ಯಾಸ ಉಂಟಾಗಿದೆ ಮತ್ತು ದೇಶದ ಕ್ರಿಕೆಟ್ ಕ್ಯಾಂಪೇನ್‌ಗಳು ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ.

ಈ ನಿರ್ಧಾರಗಳು ಏಷ್ಯಾ ಪ್ರದೇಶದ ಕ್ರಿಕೆಟ್ ಅಭಿವೃದ್ಧಿಗೆ ಮಹತ್ವದ ಪ್ರಭಾವ ಬೀರುವ ಸಾಧ್ಯತೆ ಇದೆ, ಮತ್ತು ಅಭಿಮಾನಿಗಳು ಹಾಗೂ ಸಂಬಂಧಿತ ಸಂಸ್ಥೆಗಳು ಮುಂದಿನ ಹಂತಗಳ ಬಗ್ಗೆ ಕಾಳಜಿ ವಹಿಸುತ್ತಿವೆ.

— Ganesh S

SPORTS

ರೋಹಿತ್ ಶರ್ಮಾ ನ್ಯೂಜಿಲೆಂಡ್ ಏಕದಿನ ಸರಣಿಯಲ್ಲಿ ವೃತ್ತಿಜೀವನದ ಅತ್ಯಂತ ಕೆಟ್ಟ ಸರಾಸರಿ ದಾಖಲಿಸಿದರು



ರೋಹಿತ್ ಶರ್ಮಾ ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಕಳಪೆ ಬ್ಯಾಟಿಂಗ್ ಪ್ರದರ್ಶಿಸಿ, ತಮ್ಮ ವೃತ್ತಿಜೀವನದ ಅತ್ಯಂತ ಕೆಟ್ಟ ಸರಣಿ ಸರಾಸರಿಯ ಅನಪೇಕ್ಷಿತ ದಾಖಲೆಯನ್ನು ದಾಖಲಿಸಿದರು.

ಈ ಸರಣಿಯಲ್ಲಿ ಶರ್ಮಾ ಅವರ ಪ್ರದರ್ಶನವು ನಿರೀಕ್ಷೆಗಿಂತ ಕಡಿಮೆ ಆಗಿದ್ದು, ಅವರು ಬ್ಯಾಟಿಂಗ್‌ನಲ್ಲಿ ನಿರಂತರವಾಗಿ ಅಸಮರ್ಥರಾಗಿದ್ದರು.

ಅವರ ಈ ಪ್ರದರ್ಶನವು ವೃತ್ತಿಜೀವನದ ಅತ್ಯಂತ ಕೆಟ್ಟ ಸರಣಿ ಸರಾಸರಿಯ ದಾಖಲೆಯನ್ನು ನಿರ್ಮಿಸಿದೆ, ಇದು ಕ್ರಿಕೆಟ್ ಅಭಿಮಾನಿಗಳಿಗೆ ಆಶ್ಚರ್ಯಕರವಾಗಿದೆ.

— Ganesh S

ಕಗಿಸೊ ರಬಾಡ್ ಅಲನ್ ಡೊನಾಲ್ಡ್ ರ ದಾಖಲೆಯನ್ನು ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಮುರಿದರು



ದಕ್ಷಿಣ ಆಫ್ರಿಕಾ ವೇಗಬೌಲರ್ ಕಗಿಸೊ ರಬಾಡ್ ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಅಲನ್ ಡೊನಾಲ್ಡ್ ಅವರ ಸಾರ್ವಕಾಲಿಕ ಟೆಸ್ಟ್ ವಿಕೆಟ್ ದಾಖಲೆಯನ್ನು ಮುರಿದಿದ್ದಾರೆ. ಈ ಸಾಧನೆ ರಬಾಡ್‌ಗೆ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ.

ದಶಕಗಳ ಕಾಲ ಅಚಲವಾಗಿತ್ತು; ರಬಾಡ್ ಈ ಪಂದ್ಯದಲ್ಲಿ ತನ್ನ ವಿಕೆಟ್ ಗಳನ್ನು ಹೆಚ್ಚಿಸಿ ಆ ದಾಖಲೆಯನ್ನು ಮೀರಿದರು. ಈ ಸಾಧನೆ ರಬಾಡ್‌ನ್ನು ದಕ್ಷಿಣ ಆಫ್ರಿಕಾ ಕ್ರಿಕೆಟ್ ಇತಿಹಾಸದ ಪ್ರಮುಖ ಬೌಲರ್‌ಗಳಲ್ಲಿ ಒಂದಾಗಿ ಸ್ಥಾಪಿಸಿದೆ.

ರಬಾಡ್‌ನ ಈ ಯಶಸ್ಸು ದಕ್ಷಿಣ ಆಫ್ರಿಕಾ ತಂಡದ ಬೌಲಿಂಗ್ ದಾಳಿಗೆ ಮಹತ್ವದ ಉತ್ತೇಜನ ನೀಡಿದೆ ಮತ್ತು ತಂಡದ ಭವಿಷ್ಯದ ಯಶಸ್ಸುಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಕ್ರಿಕೆಟ್ ಅಭಿಮಾನಿಗಳು ಈ ಹೊಸ ದಾಖಲೆ ಮತ್ತು ರಬಾಡ್‌ದ ಪ್ರದರ್ಶನವನ್ನು ಹರ್ಷದಿಂದ ಸ್ವೀಕರಿಸಿದ್ದಾರೆ.

— Ganesh S

ಮಾರ್ಟಿನ್ ಕ್ರೋ ಅವರ ದೃಷ್ಟಿಯಿಂದ ಹುಟ್ಟಿದ ಟಿ20 ಕ್ರಿಕೆಟ್: ದೀಪಕ್ ಪಟೇಲ್ ಅವರ ನೆನಪು



ಮಾಜಿ ಸ್ಪಿನ್ನರ್ ದೀಪಕ್ ಪಟೇಲ್ ಅವರು ಹೇಳುವಂತೆ, ನ್ಯೂಜಿಲೆಂಡ್‌ನ ದಿವಂಗತ ಮಾರ್ಟಿನ್ ಕ್ರೋ ಅವರ ದೂರದೃಷ್ಟಿಯೇ ಟಿ20 ಕ್ರಿಕೆಟ್‌ನ ಹುಟ್ಟಿಗೆ ಕಾರಣವಾಗಿದೆ.

ಮಾದರಿಯು ಜನಪ್ರಿಯತೆ ಪಡೆದಿದ್ದು, ಅದರ ಮೂಲವನ್ನು ಕ್ರೋ ಅವರ ದೃಷ್ಟಿಗೆ ಹಿಂತಿರುಗಿಸಬಹುದು. ಕ್ರೋ ಅವರು 2000ರ ದಶಕದ ಆರಂಭದಲ್ಲಿ ಈ ರೂಪವನ್ನು ಪ್ರಸ್ತಾಪಿಸಿ, ಪಂದ್ಯಗಳ ವೇಗ ಮತ್ತು ಮನರಂಜನೆ ಹೆಚ್ಚಿಸುವ ಉದ್ದೇಶ ಹೊಂದಿದ್ದರು.

ಪಟೇಲ್ ಅವರು ತಮ್ಮ ಹೇಳಿಕೆಯಲ್ಲಿ, “ಮಾರ್ಟಿನ್ ಕ್ರೋ ಇಲ್ಲದಿದ್ದರೆ ಟಿ20 ಕ್ರಿಕೆಟ್ ಇರುತ್ತಿರಲಿಲ್ಲ” ಎಂದು ಒತ್ತಿ ಹೇಳಿದರು. ಅವರ ಮಾತುಗಳು ಕ್ರೋ ಅವರ ಕೊಡುಗೆಗೆ ಗೌರವ ಸೂಚಿಸುವುದರ ಜೊತೆಗೆ, ಕ್ರಿಕೆಟ್‌ನ ಹೊಸ ಯುಗದ ಆರಂಭಕ್ಕೆ ಕಾರಣವಾದ ವ್ಯಕ್ತಿಯನ್ನು ನೆನಪಿಸುವುದಾಗಿದೆ.

— Ganesh S